
'ಗಾನಕಲಾಸಿಂಧು' ಎಂಬ ಸನ್ಮಾನವೂ ದೊರೆಯಿತು. ಚೌಡಯ್ಯನವರು 'ತ್ರಿಮುಕುಟ' ಎಂಬ ಅಂಕಿತದಲ್ಲಿ ಅನೇಕ ಕೃತಿಗಳನ್ನೂ, ತಿಲ್ಲಾನಗಳನ್ನೂ ರಚಿಸಿದ್ದಾರೆ. ಅಯ್ಯನಾರ್ ಕಲಾಶಾಲೆಯನ್ನು ಬೆಂಗಳೂರು ಮತ್ತು ಮೈಸೂರಿನಲ್ಲಿ ಸ್ಥಾಪಿಸಿ ಸಂಗೀತಾಸಕ್ತರ ನೆರವಿಗೆ ಬಂದಿದ್ದಾರೆ. ಜೊತೆಗೆ ಇಲ್ಲಿ ಪಿಟೀಲು ವಾದನದ ಶಿಕ್ಷಣದ ವ್ಯವಸ್ಥೆಯನ್ನೂ ಮಾಡಿದ್ದಾರೆ.

'ಕರ್ನಾಟಕ ಸಂಗೀತದ ಪಿತಾಮಹ' ರೆನಿಸಿರುವ ಪುರಂದರ ದಾಸರು ಹಾಕಿಕೊಟ್ಟಿರುವ ಪದ್ಧತಿಯಲ್ಲೇ ಇಂದಿಗೂ ಕರ್ನಾಟಕ ಸಂಗೀತವನ್ನು ಎಲ್ಲರೂ ಅಭ್ಯಾಸ ಮಾಡುವುದು. ಈ ಸಂಪ್ರದಾಯವನ್ನು ಮುಂದುವರೆಸಿಕೊಂಡು ಹೋಗುವುದರಲ್ಲಿ ಕರ್ನಾಟಕದ ಕಲಾವಿದರ ಕೊಡುಗೆ ಅಮೋಘವಾದುದು. ಇಂತಹ ಕಲಾಮಣಿಗಳನ್ನು ಪ್ರೋತ್ಸಾಹಿಸಿ ಪೋಷಣೆಯನ್ನು ನೀಡಿದ ನಮ್ಮ ನಾಡಿನ ಭವ್ಯ ಪರಂಪರೆಯ ಬಗ್ಗೆ ನಾವು ಬರೀ ಹೆಮ್ಮೆ ತಾಳಿದರೆ ಸಾಲದು. ಈ ಶಾಸ್ತ್ರವನ್ನು ಬೆಳೆಸಿಕೊಂಡು ಹೊಸ ಹೊಸ ಮಾಧ್ಯಮಗಳಲ್ಲಿ ಪ್ರಯೋಗ ಮಾಡಿ ಅದನ್ನು ಜನಪ್ರಿಯಗೊಳಿಸಿ ಸಮೃದ್ಧಗೊಳಿಸಬೇಕು. ಇದು ನಮ್ಮೆಲ್ಲರ ಕರ್ತವ್ಯ. ಯುವ ಪೀಳಿಗೆಯಲ್ಲಿ ಇಂದು ಅನೇಕರು ಸಂಗೀತದ ಬಗ್ಗೆ ಆಸಕ್ತಿ ವಹಿಸಿ ಅದನ್ನು ವೃತ್ತಿಯನ್ನಾಗಿ ಆಯ್ದುಕೊಂಡಿದ್ದರೂ ಸಂಗೀತ ಕಲೆಗೆ ಅವಶ್ಯವಾದ ನಿಷ್ಠೆ, ಸಂಪೂರ್ಣ ಸಮರ್ಪಣೆಗಳು ಅಪರೂಪವಾಗಿವೆ. ಹಣ, ಹೆಸರು ಹಾಗೂ ಕೀರ್ತಿಗಳೇ ಪ್ರಮುಖವಾಗಿದ್ದು, ಭಾವ ಹಾಗೂ ಭಕ್ತಿಗಳು ಹಿಂಬದಿಗೆ ತಳ್ಳಲ್ಪಟ್ಟು, ಸಂಗೀತವು ಇನ್ನು ಮುಂದೆ ಉಪಾಸನೆಯಾಗಿ ಉಳಿಯುವುದೇ ಎಂಬುದೇ ಸಂಶಯವಾಗಿದೆ. ಮನೋರಂಜನೆಗಾಗಿ ಸಂಗೀತವನ್ನು ಬಳಸಬಹುದಾದರೂ ಅದು ಮೂಲತಃ ಮನಸ್ಸಿಗೆ ಶಾಂತಿ, ನೆಮ್ಮದಿ ಹಾಗೂ ಶುದ್ಧ ರಸಾಸ್ವಾದವನ್ನು ನೀಡುವ ಅಮೃತವರ್ಷಿಣಿಯಾಗಿಯೇ ಉಳಿಯಬೇಕು. ✡



# ಪ್ರಹಸನ ಪ್ರಸಂಗ

**ಒ**ಮ್ಮೆ ರೈಲಿನಲ್ಲಿ ಪ್ರಯಾಣ ಹೊರಟಿದ್ದ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೈನ್ ದಿನಪತ್ರಿಕೆಯನ್ನು ಮಾರುತ್ತಿದ್ದ ವ್ಯಕ್ತಿಯನ್ನು ಕಂಡು ಒಂದು ಪತ್ರಿಕೆಯನ್ನು ಕೊಂಡುಕೊಂಡರು. ಓದಲು ಪ್ರಾರಂಭಿಸಿದಾಗ ಕನ್ನಡಕವನ್ನು ಮನೆಯಲ್ಲೇ ಮರೆತಿರುವುದು ನೆನಪಾಯಿತು. ಪತ್ರಿಕೆಯನ್ನು ಮಾರುತ್ತಿದ್ದ ವ್ಯಕ್ತಿಯನ್ನೆ ಕೇಳಿಕೊಂಡರು, "ಅಯ್ಯಾ, ಸ್ವಲ್ಪ ಮುಖ್ಯಾಂಶಗಳನ್ನು ಓದಿ ಹೇಳುತ್ತೀಯಾ?" ಆ ವ್ಯಕ್ತಿ ಪೆಚ್ಚು ಮೋರೆ ಹಾಕಿಕೊಂಡು ಹೇಳಿದ, "ಸಾರ್, ನಿಮ್ಮಂತೆ ನನಗೂ ಓದಲು ಬರುವುದಿಲ್ಲ!"

✻ ✻ ✻ ✻

**ಕ**ಳ್ಳರ ಗುಂಪೊಂದು ರಾತ್ರಿ ಹೊತ್ತು ಪಹರೆಯಲ್ಲಿದ್ದ ಪೊಲೀಸ್ ಪೇದೆಯನ್ನೇ ಬೆದರಿಸಿ ಅವನ ಬಳಿಯಿದ್ದ ಕೈಗಡಿಯಾರ, ಹಣ ಎಲ್ಲವನ್ನೂ ದೋಚಿತು. ಮರುದಿವಸ ಠಾಣೆಯಲ್ಲಿ ಇನ್‌ಸ್ಪೆಕ್ಟರ್ ಸಾಹೇಬರು ವಿಚಾರಣೆ ಮಾಡುತ್ತ ಘಟನೆಯ ವಿವರಗಳನ್ನು ಕೇಳಿದರು, "ಅಲ್ಲಯ್ಯಾ, ಕಳ್ಳರು ಬಂದಾಗ ನಿನ್ನ ಬಳಿ ಪಿಸ್ತೂಲ್ ಇರಲಿಲ್ಲವೇನಯ್ಯಾ?" ಪೇದೆ ಉತ್ತರವಿತ್ತ, "ಇತ್ತು ಸಾರ್! ಬಹಳ ಜೋಪಾನವಾಗಿ ಬಚ್ಚಿಟ್ಟುಕೊಂಡಿದ್ದೆ. ಗೊತ್ತಾಗಿಬಿಟ್ಟರೆ ಅದನ್ನೂ ಕದ್ದುಬಿಟ್ಟಾರು ಅಂತ ಬಾಯಿ ಬಿಡಲೇ ಇಲ್ಲ!"

✻ ✻ ✻ ✻

ಒಬ್ಬ ದರ್ಜಿ ಮತ್ತು ಅವನ ಗಿರಾಕಿಯ ನಡುವಿನ ಸಂಭಾಷಣೆ:

**ದರ್ಜಿ**: ಇಲ್ಲ ಸಾರ್, ನಾನು ಸಭ್ಯ ಗಿರಾಕಿಯ ಬಳಿ ಎಂದೂ ಹಣ ಕೇಳುವುದಿಲ್ಲ.

**ಗಿರಾಕಿ**: ಆದರೆ ಅವನು ಹಣ ಕೊಡದೇ ಹೋದರೆ ಏನು ಮಾಡುವೆ ?

**ದರ್ಜಿ**: ಹಾಗೆ ಮಾಡಿದರೆ ಅವನು ಸಭ್ಯನಲ್ಲ ಎಂದು ತೀರ್ಮಾನಿಸಿ ಹಣ ಪಾವತಿ ಮಾಡಲು ಹೇಳುತ್ತೇನೆ!

**ತ**ಮ್ಮ ೯೯ನೆಯ ಜನ್ಮದಿನವನ್ನು ಆಚರಿಸುತ್ತಿದ್ದ ವೃದ್ಧರನ್ನು ವರದಿಗಾರನೊಬ್ಬ ಸಂದರ್ಶಿಸಲು ಪ್ರತ್ಯಕ್ಷನಾದ. ಸಂಭಾಷಣೆಯ ಅನಂತರ ಬೀಳ್ಕೊಳ್ಳುತ್ತ ಸುದ್ದಿಗಾರ ಹೇಳಿದ, "ಸಾರ್, ಮುಂದಿನ ವರ್ಷ ತಾವು ೧೦೦ ವರ್ಷಗಳು ತುಂಬಿ ಸಂತೋಷಪಡುವುದನ್ನು ಕಾಣಲು ನನಗೆ ಆಸೆ. ಆಗ ಮತ್ತೊಮ್ಮೆ ಮಾತನಾಡುವ ಅವಕಾಶ ಸಿಗುವುದೆಂದು ನಂಬಿರುವೆ." ಆ ಮುದುಕರು ಹೇಳಿದರು, "ಹ್ಞಾ! ಯಾಕಾಗಬಾರದು? ನೀನಿನ್ನೂ ಯುವಕ, ಆರೋಗ್ಯವಂತನಾಗಿಯೇ ಕಾಣುತ್ತಿದ್ದೀಯಲ್ಲಾ!"

✻ ✻ ✻ ✻

**ತ**ಂಗಿಯ ಆರೋಗ್ಯ ಕೆಟ್ಟಿದೆ ಎಂದು ತಿಳಿದ ಅಕ್ಕ ಅವಳ ಮನೆಗೆ ಫೋನ್ ಮಾಡಿದಾಗ, ಆ ಕಡೆಯಿಂದ ತಂಗಿಯ ೧೦ ವರ್ಷದ ಮಗಳು ಮೆಲುದನಿಯಲ್ಲಿ ಉತ್ತರಿಸಿದಳು, "ಹಲೋ!"

**ಅಕ್ಕ** : ಹಲೋ, ನಿನ್ನ ಅಮ್ಮ ಹೇಗಿದ್ದಾಳೆ?

**ಮಗಳು** (ಮತ್ತೆ ಪಿಸುಗುಟ್ಟುತ್ತ): ಮಲಗಿದ್ದಾಳೆ.

**ಅಕ್ಕ**: ಡಾಕ್ಟರ್ ಬಳಿ ಹೋಗಿದ್ದಳೆ? ಔಷಧಿ ತೆಗೆದುಕೊಳ್ಳುತ್ತಿರುವಳೇ?

**ಮಗಳು** : ಹ್ಞೂ, ಔಷಧಿ ತೆಗೆದುಕೊಂಡಳು, ಎನ್ನುತ್ತಾ ಮತ್ತೆ ಪಿಸುಗುಟ್ಟಿದಳು.

**ಅಕ್ಕ**: ಸರಿ, ಎಬ್ಬಿಸಬೇಡ, ಆಮೇಲೆ ನಾನು ಫೋನ್ ಮಾಡಿದ್ದೆ ಎಂದು ತಿಳಿಸು. ಅಂದಹಾಗೆ, ನೀನೇನು ಮಾಡುತ್ತಿರುವೆ?

**ಮಗಳು** (ಮತ್ತೆ ಮೆಲುದನಿಯಲ್ಲಿ): ನಾನು ಕಹಳೆ ನುಡಿಸುವುದನ್ನು ಅಭ್ಯಾಸಮಾಡುತ್ತಿದ್ದೀನಿ.

✡